**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 21/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಕಮಲಮ್ಮ | | *ಪ್ರಮಾಣ ಮಾಡಿದ ದಿನಾಂಕಃ* |
| ಗಂಡನ ಹೆಸರು | ಃ ಶಿವಣ್ಣ | | **28.09.2022** |
| ವಯಸ್ಸು | ಃ 67 ವರ್ಷ | | |
| ವೃತ್ತಿ | ಃ ಗೃಹಿಣಿ | | ಪಿಡಬ್ಲ್ಯೂ ಃ 05 |
| ವಾಸ ಸ್ಥಳ | ಃ ಮೈಸೂರು | | ಸಿಡಬ್ಲ್ಯೂ ಃ 17 |

*ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ*

ನ್ಯಾಯಾಲಯದೆದುರು ಹಾಜರಿರುವ ಆರೋಪಿಯ ಪರಿಚಯ ಇದೆ. ಆಕೆ ನನ್ನ ತಂಗಿ. ಮೃತ ಪವಿತ್ರಾಕುಮಾರಿ ನನಗೆ ಗೊತ್ತಿಲ್ಲ. ಇವರ ನಡುವೆ ಹಣಕಾಸಿನ ವ್ಯವಹಾರ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ಮೃತಳ ನಡುವೆ ಹಣಕಾಸಿನ ವಿಚಾರದಲ್ಲಿ ಗಲಾಟೆ ಆದ ವಿಚಾರ ಗೊತ್ತಿಲ್ಲ. ನಾನು ಈ ಬಗ್ಗೆ ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

*(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೋಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)*

*ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-*

2. ಮೃತ ಪವಿತ್ರಾಕುಮಾರಿ ಆರೋಪಿಯ ಕಡೆಯಿಂದ ಸಾಲ ಪಡೆದಿದ್ದಳು ಎಂದರೆ ಗೊತ್ತಿಲ್ಲ. ಹಣ ಮತ್ತು ಬಡಿ ಸೇರಿ ರೂ.3 ಲಕ್ಷ ಕೊಡುವಂತೆ ಮೃತಳ ಜೊತೆ ಗಲಾಟೆ ಮಾಡಿ ಕೆಟ್ಟ ಮಾತುಗಳಿಂದ ಬೈದು ನೀನು ಸತ್ತರೆ ಎಷ್ಟು ಇದ್ದರೆ ಎಷ್ಟು ಎನ್ನುವುದಾಗಿ ಗಲಾಟೆ ಮಾಡಿದ್ದಳು ಎಂದರೆ ಸರಿಯಲ್ಲ. ಆದರಿಂದ ಮೃತ ಪವಿತ್ರಾಕುಮಾರಿ ದಿನಾಂಕ 11.06.2015ರಂದು

ತಿಗಣೆ ಔಷಧಿಯನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನುವ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ. ಆರೋಪಿಯ ಕಿರುಕುಳದಿಂದಾಗ ಮೃತಳು ಆತ್ಮಹತ್ಯೆ ಮಾಡಿ ಕೊಂಡಿದ್ದಾಳೆ ಎನ್ನುವುದು ಸರಿಯಲ್ಲ. ನಾನು ಇದೇ ರೀತಿ ಪೊಲೀಸರಿಗೆ ಈಗ ಓದಿ ಹೇಳಿದಂತೆ "ವೇದಾವತಿ ಯವರು ....... ಮೃತಪಟ್ಟಿರುತ್ತಾರೆ" ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಿದೆ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ರುಜು ಇರುತ್ತದೆ. ಪೊಲೀಸ ನೋಟೀಸಿನಲ್ಲಿ ಸಾಕ್ಷಿ ರುಜು ಗುರುತಿಸಿದ್ದು, ಅದನ್ನು ನಿಪಿ-6 ಎಂದು ಸಾಕ್ಷಿ ರುಜುವನ್ನು ನಿಪಿ-6(ಎ) ಎಂದು ಗುರುತಿಸಿದೆ. ಪೊಲೀಸರು ಠಾಣೆಯಲ್ಲಿ ರುಜು ಪಡೆದಿದ್ದರು. ಅದರಲ್ಲಿ ಏನು ಬರೆದಿದೆ ಎನ್ನುವುದು ಮತ್ತು ಯಾವ ವಿಚಾರಕ್ಕೆ ಪಡೆದಿದ್ದರು ಎಂದು ಗೊತ್ತಿಲ್ಲ. ನೋಟೀಸನ್ನು ಹೇಳಿಕೆ ಕೊಡುವ ಮೊದಲು ನನಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿ ನನಗೆ ತಂಗಿಯಾಗಿರುವುದರಿಂದ ಅವಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರಿಂದ:- ಇಲ್ಲ

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

ಓ ಹೇ ಕೇ ಸ ಇ ಎ ಒ.,

**28.09.2022.**
(ಎಂ.ಎಲ್. ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.